"ಸುಮ್ನಿರು ನೀನು. ನಿನ್ನ ಸೋಂಭೇರಿತನಕ್ಕೆ ನಮ್ಮಪ್ಪನ್ನ ಹೊಣೆ ಮಾಡ್ಬೇಡ..."

ಅಂದುಕೋ ಮಗಳೇ, ಹಾಗೇ ಅಂದುಕೋ. ಪ್ರತಿರೋಧ ಅನ್ನುವುದು ಹೇಗೆ ಮೆಟ್ಟಿ ಮುರಿಯಬಲ್ಲುದು, ನೆಲಕ್ಕೆ ಹಣಿಯಬಲ್ಲುದು ಎನ್ನುವುದು ನಿನಗೇನು ಗೊತ್ತು? ನೀನೂ ಈ ಹೊಂದಾಣಿಕೆಗೆ ಒಂದು ಕಾರಣವಾಗಿದ್ದೆ ಅನ್ನುವುದನ್ನು ಹೇಗೆ ಹೇಳಲಿ? ಮನಸ್ಸಲ್ಲೇ ಅಂದುಕೊಂಡಿದ್ದಳು ರೋಹಿಣಿ.

ಅಮ್ಮನನ್ನು ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಒತ್ತಾಯಿಸಿದ ಮಗಳು ತುದಿನಾಲಿಗೆಯಲ್ಲಿ ಆ ಮಾತು ಹೇಳಿರಲಿಲ್ಲ. ಅದಕ್ಕೆ ಬೇಕಾದ ಪರಿಕರಗಳನ್ನೆಲ್ಲಾ ಸಜ್ಜುಗೊಳಿಸಿಕೊಟ್ಟು,

"ಮುಂದಿನ ಸಲ ಬರ್ಬೇಕಾದ್ರೆ ಕಂಪ್ಯೂಟರ್ ತಂದು ಕೊಡ್ತೀನಿ. ಬರೆಯೋದು, ಕಳಿಸೋದು ಎಲ್ಲಾ ಬೆರಳ ತುದೀಲಿ ಮಾಡಬಹ್ದು..." ಅಂದಿದ್ದಳು.

ನಿಜಕ್ಕೂ ದಿಗಿಲು ಬಿದ್ದಿದ್ದಳು ರೋಹಿಣಿ. "ನಾನಾ? ಕಂಪ್ಯೂಟರ್‌ನಲ್ಲಿ ಬರೆಯೋದನ್ನ ಕಲಿಯೋದಾ? ಅದರ ಓನಾಮ ಕೂಡಾ ಗೊತ್ತಿಲ್ಲ ನಂಗೆ."

"ಗೊತ್ತಿಲ್ದಿದ್ರೆ ಗೊತ್ತು ಮಾಡ್ಕೋಬಹುದು. ನೀನೇನು ಅನಕ್ಷರಸ್ಥೆ ಅಲ್ಲ. ನಿಂಗೂ ಡಿಗ್ರಿ ಆಗಿದೆ."

ಪೆನ್ನಿಗೆ ಇಂಕು ತುಂಬುವಾಗ ಮೈಯಲ್ಲಿ ರೋಮಾಂಚನ. ಬಿಳಿಯ ಹಾಳೆಗಳ ಮೇಲೆ ಅನುಭವಗಳನ್ನು ಅವುಗಳ ಒಗ್ಗುವಿಕೆಗೆ ತಕ್ಕಂತೆ ಕತೆಯಾಗಿಸಿ, ಕವನವಾಗಿಸಿ, ಮುಂದೆ ಕಾದಂಬರಿಯನ್ನೂ ಬರೆದೇನಾ? ಯಾಕಾಗಬಾರದು?

ಫೋಟೊ ಫ್ರೇಮಿನಲ್ಲಿರುವ ಇದೇ ಇವನ ಕಣ್ಣಳವಿನಲ್ಲಿ ಕೂತು ಬರವಣಿಗೆಯ ಆರಂಭ. ಇಲ್ಲ. ಬರವಣಿಗೆಯ ಹದ ಮರೆತು ಹೋಗಿಲ್ಲ. ಒಂದಿಷ್ಟು ಹೆಣಗಾಡಬೇಕಾದರೂ ಕ್ರಮೇಣ ಜಾಡು ಕಂಡುಕೊಳ್ಳಬಹುದು. ನನ್ನದೇ ಜಾಡು. ಬರೆದೇನು, ಬರೆಯುತ್ತೇನೆ.

ರೋಹಿಣಿ ಹೊಸ ಹುರುಪೊಂದು ಮೈಮನಗಳಲ್ಲಿ ಆವಾಹನೆಯಾದಂತೆ ಬರವಣಿಗೆಯ ಸೆಳೆತಕ್ಕೆ ಸಿಕ್ಕಿಕೊಂಡಿದ್ದಳು. 'ಹೊಸ ಜನ್ಮ ಕೊಟ್ಟೆ ಮಗಳೇ. ನನ್ನ ಏಕಾಂತ ಇನ್ನು ಏಕಾಂತವಲ್ಲ. ನನ್ನ ಸೃಷ್ಟಿಯ ಪಾತ್ರಗಳು ನಿರಂತರವಾಗಿ ನನ್ನೊಡನೆ ಒಡನಾಡುತ್ತಾ ನನ್ನ ಜೊತೆಗಿರುತ್ತಾರೆ. ಸ್ಪಂದಿಸುತ್ತಾರೆ ನನ್ನ ಇಷ್ಟಾನಿಷ್ಟಗಳಿಗೆ. ಗೌರವಿಸುತ್ತಾರೆ ನನ್ನ ಭಾವನೆಗಳಿಗೆ.' ಬರೆಯುತ್ತಾ ಹೋದಂತೆ ತೆಕ್ಕೆಗೊಗ್ಗಿಕೊಳ್ಳುವ ಭರವಸೆ ಹುಟ್ಟಿಸುವ ಪಾತ್ರಗಳು. ಒಂದರ ಹಿಂದೊಂದು ನುಗ್ಗಿ ಬರುತ್ತಾ, ಬೊಗಸೆ ತುಂಬಾ ಹೊಳೆಹೊಳೆವ ಕಲ್ಪನೆಯ ನಕ್ಷತ್ರಗಳು. ಒಂದೊಂದಾಗಿ, ಒಂದೊಂದಾಗಿ ಪೋಣಿಸಿ ಮಾಲೆ ಮಾಡಿದಂತೆಲ್ಲಾ ಅಕ್ಷಯವಾಗುವ ನಿಧಿಗಳು.

★★★

ಗಂಜಿಯೂಟ ಮುಗಿಸಿ, ಎಂಜಲೆಲೆಯನ್ನು ಗೊಬ್ಬರದ ಗುಂಡಿಗೆ ಬಿಸಾಕಿ, ಬಚ್ಚಲಲ್ಲಿ ಕೈ ತೊಳೆದು ಬರುವಾಗಲೂ ರೋಹಿಣಿಯ ತಲೆಯೊಳಗೆ ಅದೇ ಗುಂಗು. ಸಿಕ್ಕಿಯೂ ಸಿಗದಂತೆ ನುಣುಚಿಕೊಳ್ಳುವ ಮಾಯಾಮೃಗದಂತಾ ಪದಗಳ ಗುನುಗು. ರಾತ್ರಿ ಮಗಳು ಫೋನ್ ಮಾಡಿ ಹೇಳಿದ್ದಳು,

"ಅಮ್ಮಾ, ಹೊಸದೊಂದು ಕವನ ರೆಡೀ ಇಟ್ಕೊಂಡಿರು. ಕೇಳಿದೋರು ಭೇಷ್ ಅಂತ ಬೆನ್ನು ತಟ್ಬೇಕು, ಅಂತಾದ್ದು..."

"ಯಾಕೇ?"

"ಮುಂದಿನ ಭಾನುವಾರ ಏಳೆಂಟು ಜನ ನಮ್ಮನೇಲಿ ಸೇರ್ತಿದೀವಿ. ಕತೆ, ಕವಿತೆ ಅಂತ ಚರ್ಚೆ ಇರುತ್ತೆ. ಕವಿಗೋಷ್ಠೀಲಿ ನೀನು ನಿನ್ನ ಕವಿತೆ ಓದ್ಬೇಕು..."

ಉಗುಳು ನುಂಗಿಕೊಂಡಿದ್ದಳು ರೋಹಿಣಿ.

"ದಿಢೀರ್ ಅಂತ ಹೀಗೆ ಹೇಳಿದ್ರೆ ಹೇಗೆ? ಭಾನುವಾರಕ್ಕೆ ಐದೇ ದಿನ..."